<u>ಅ.ದಾವಾ ನಂ. 161/17</u> ಪಿ.ಡಬ್ಲ್ಯೂ-1

<u>ದಿನಾಂಕ 07/07/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ</u> ಮೊದಲನೇ ಪ್ರತಿವಾದಿ ಪರ ಶ್ರೀ ಎಂ.ಈ.ಎಸ್. ವಕೀಲರಿಂದ

ಮೊದಲನೇ ವಾದಿ ನನ್ನ ಅಣ್ಣನಾಗುತ್ತಾರೆ. ಮೊದಲನೆ ಪ್ರತಿವಾದಿ ನನ್ನ ತಂದೆ. 2 ನೇ ಪ್ರತಿವಾದಿ ನನ್ನ ದೊಡ್ಡಣ್ಣ. 3 ನೇ ಪ್ರತಿವಾದಿ ಕೊನೆ ತಮ್ಮ. 4 ನೇ ಪ್ರತಿವಾದಿ ನನ್ನ ತಂಗಿ ಆಗುತ್ತಾಳೆ. ನನ್ನ ತಾತನ ಹೆಸರು ಚನ್ನೇಗೌಡ ಃಉ ಮಾಟೇಗೌಡ. ನನ್ನ ತಾತನಿಗೆ ಇಬ್ಬರು ಗಂಡುಮಕ್ಕಳು. ಮೊದಲನೇ ಯವರು ನನ್ನ ತಂದೆಯವರಾಗಿರುತ್ತಾರೆ. 2 ನೇಯವರು ಅಪ್ಪೇಗೌಡ ನನ್ನ ಚಿಕ್ಕಪ್ಪನಾಗಿರುತ್ತಾರೆ. ಅಪ್ಪೇಗೌಡರು ಇನ್ನಾ ಜೀವಂತ ಇರುತ್ತಾರೆ.

2. ನಮ್ಮ ಪಿತ್ರಾರ್ಜಿತ ಆಸ್ತಿಗಳೆಂದರೆ ಸರ್ವೆ ನಂ. 115, 118, 74, 72 ಹಾಗೂ 90. ಸಾಕ್ಷಿ ಹೇಳುತ್ತಾರೆ ನನಗೆ ಜಮೀನಿನ ಹೆಸರುಗಳು ತಿಳಿದಿರುತ್ತದೆ ಸರ್ವೆ ನಂಬರುಗಳು ನೆನಪಿಲ್ಲ. ಇಂತದ್ದೇ ಸರ್ವೆ ನಂಬರಿನಲ್ಲಿ ಇಂತಿಷ್ಟೇ ವಿಸ್ತೀರ್ಣ ಎಂದು ನಿಮಗೆ ಹೇಳಲಾಗುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಜಮೀನಿಗೆ ಹೋದರೆ ಗೊತ್ತಾಗುತ್ತದೆ.

3. ನನ್ನ ತಂದೆ ಸರ್ಕಾರಿ ಸೇವೆಯಲ್ಲಿ ಶಿಕ್ಷಕರಾಗಿದ್ದರು ಎಂದರೆ ಸರಿ. ನನ್ನ ತಂದೆ 1961 ರಲ್ಲೇ ಶಿಕ್ಷಕರಾಗಿದ್ದರು ಎಂದರೆ ಇರಬಹುದು. ನನ್ನ ತಂದೆಯವರು ಸುಮಾರು 20-25 ವರ್ಷ ಸರ್ಕಾರಿ ಸೇವೆಯಲ್ಲಿ ಇದ್ದಿರಬಹುದು. ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದರೇ ಪಿಂಚಣಿ ಹಣ ಹಾಗೂ ಇತರೆ ಸರ್ಕಾರಿ ಸವಲತ್ತುಗಳು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ತಾತ ಹಾಗೂ ಆತನ ಇಬ್ಬರು ಗಂಡುಮಕ್ಕಳು ಅವರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗದಲ್ಲಿ ಒಳಗೊಂಡಿದ್ದ ಪಿತ್ರಾರ್ಜಿತ ಆಸ್ತಿಗಳ ಮೇಲೆ ಸರ್ವೆ ನಂ. 115, 118. ಸಾಕ್ಷಿ ಹೇಳುತ್ತಾರೆ ಇನ್ನೂ ಇದ್ದಾವೆ ಆದರೆ ನನಗೆ ಸರ್ವೆ ನಂಬರ್ ಗಳು ಈಗ ನೆನಪಿಲ್ಲ. ನನ್ನ ತಾತನಿಗೆ ಬಂದಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.

5. ಬಿ ಅನುಸೂಚಿಯ ಸರ್ವೆ ನಂ. 115/6 ರಲ್ಲಿ 16 ಗುಂಟೆ ಜಮೀನು ನಿಮ್ಮ ತಂದೆಗೆ ದರಕಾಸ್ತಿನ ಮೂಲಕ ಬಂದಿದ್ದಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿ ಹೇಳುತ್ತಾರೆ ಅದು ನನ್ನ ತಾತನಿಂದ ನನ್ನ ತಂದೆಗೆ ಬಂದಿದ್ದು ಎಂದು. ಸದರಿ ಆಸ್ತಿಯು ನನ್ನ ತಾತನಿಂದ ನನ್ನ ತಂದೆಗೆ ಬಂದ ಹಾಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

6. ಸಿ ಅನುಸೂಚಿಯ ಐಟಂ 1 ಮತ್ತು 2 ನಿಮ್ಮ ತಂದೆ ಯಾರಿಂದ ಖರೀದಿ ಮಾಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನಂಜಮ್ಮ ಹಾಗೂ ಅಣ್ಣಾಜೀಗೌಡರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದು. ದಿಃ 04.03.2002 ಕ್ಕೆ ಸದರಿ ಆಸ್ತಿಗಳನ್ನು ನಿಮ್ಮ ತಂದೆ 69 ಸಾವಿರಕ್ಕೆ ಕ್ರಯ ಪಡೆದಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿ ಹೇಳುತ್ತಾರೆ ನಾವು ಮಕ್ಕಳೆಲ್ಲಾ ಸೇರಿ ಸದರಿ ಕ್ರಯ ಮಾಡಿಸಿರುತ್ತೇವೆ ಎಂದು. 2002 ನೇ ಇಸವಿಗೆ ನನಗೆ ಸುಮಾರು 30 ವರ್ಷ ಆಗಿತ್ತು. ನಾನು ಕ್ರಯವಾಗುವ ಸಮಯಕ್ಕೆ ಹಾಜರಿರಲಿಲ್ಲ. ಸದರಿ ಕ್ರಯಪತ್ರವನ್ನು ನಾನು ನೋಡಿ ಓದಿಕೊಂಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ನಾವೇ ಸದರಿ ಕ್ರಯವನ್ನು ಒಟ್ಟು ಕುಟುಂಬದ ಪೈಕಿ ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸುತ್ತಿರುವುದಾಗಿ ಬರೆಸಿರುವುದಿಲ್ಲ.

7. ಸಿ ಅನುಸೂಚಿಯ ಐಟಂ 1 ಮತ್ತು 2 ನಮ್ಮ ತಂದೆ ಪ್ರತಿವಾದಿ 2 ಮತ್ತು 3 ರವರಿಗೆ ದಾನಪತ್ರ ತನ್ನ ಸ್ವಯಾರ್ಜಿತ ಆಸ್ತಿ ಎಂದು ಹೇಳಿಕೊಂಡು ಮಾಡಿರುವುದು ಸರಿ. ಸಾಕ್ಷಿ ಹೇಳುತ್ತಾರೆ ಆದರೆ ಅದು ತಪ್ಪು ಎಂದು. ಸದರಿ ದಾನಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ದಾನಪತ್ರವೊಂದನ್ನು ತೋರಿಸಲಾಗಿ ಅದರಲ್ಲಿ ಕಾಳೇಗೌಡ ತನ್ನ ಸ್ವಯಾರ್ಜಿತ ಸ್ವತ್ತೆಂದು ಹೇಳಿಕೊಂಡು ದಾನ ಮಾಡಿರುವುದಾಗಿ ನಮೂದಾಗಿರುತ್ತದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಮೂದಾಗಿದ್ದರೂ ಅದು ತಪ್ಪು ಎಂದು. ಸದರಿ ದಾನಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿಸು.

8. ನಿ.ಡಿ 1 ರಂತೆ ಪ್ರತಿವಾದಿ 2 ಮತ್ತು 3 ರವರು ಖಾತೆ ಮಾಡಿಸಿಕೊಳುಳವ ವಿಚಾರದಲ್ಲಿ ನಾನು ತಹಶೀಲ್ದಾರರಿಗೆ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ಪ್ರಕರಣ ನಡೆಸಿಕೊಂಡಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಾನಪತ್ರ ತಪ್ಪಾಗಿದ್ದು ಅದರ ಮೇಲೆ ಯಾವುದೇ ಖಾತೆ 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾಡಬಾರದು ಎಂದು ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಕರಾರನ್ನು ಅಲ್ಲೆಗೆಳೆಸಿ 2 ಮತ್ತು 3 ನೇ ಪ್ರತಿವಾದಿಗಳಿಗೆ ಖಾತೆಯಾಗಬೇಕೆಂದು ಆದೇಶವಾಗಿ ಈಗಲೂ ಅವರ ಹೆಸರಿನಲ್ಲಿಯೇ ಸದರಿ ಆಸ್ತಿಗಳ ಖಾತೆ ಆಗಿರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿ ತನ್ನ ಸ್ವಾಧೀನಕ್ಕೆ ನಾನು ತೊಂದರೆ ಕೊಡುತ್ತಿದ್ದಾಗಿ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯೊಂದನ್ನೂ ಸಲ್ಲಿಸಿದ್ದರು ಎಂದರೆ ಸರಿ.

9. ಸಿ ಅನುಸೂಚಿಯ ಐಟಂ ನಂ. 3 ನ್ನು ನನ್ನ ತಂದೆ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ನಾನು ಸದರಿ ಸ್ವತ್ತಿನ ಪೈಕಿ ನನ್ನ ತಂದೆಯ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದೇನೆ ಎಂದು ನನ್ನ ತಂದೆಯವರು ನನ್ನ ವಿರುದ್ಧ ಹಾಸನ ನ್ಯಾಯಾಲಯದಲ್ಲಿ ಅ.ದಾವಾ ಸಂಖ್ಯೆ 571/2010 ನ್ನು ಸಲ್ಲಿಸಿದ್ದರು ಎಂದರೆ ನನಗೆ

ಗೊತ್ತಿಲ್ಲ. ಸದರಿ ದಾವೆಯಲ್ಲಿ ಸದರಿ ಆಸ್ತಿಯೂ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು ನಾವು ಯಾರೂ ಮಕ್ಕಳು ನಮ್ಮ ತಂದೆಗೆ ತೊಂದರ ನೀಡಬಾರದೆಂದು ನಿರ್ಬಂಧಾಜ್ಞೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**10.** ಡಿ ಅನುಸೂಚಿ ಸ್ವತ್ತು ಈಗಲೂ ನನ್ನ ತಂದೆಯ ಹೆಸರಿನಲ್ಲೇ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ನನ್ನ ತಂದೆ ಮಂಜೇಗೌಡರವರಿಂದ ಕ್ರಯಕ್ಕೆ ಪಡೆದಿದ್ದರು ಸದರಿ ಸ್ವತ್ತನ್ನು ಪಡೆದ ನಂತರ ನನ್ನ ತಂದೆ ಅನ್ಯಕ್ರಾಂತ ಮಾಡಿಸಿ ಮನೆಯನ್ನು ಸಹ ಕಟ್ಟುಕೊಂಡಿರುತ್ತಾರೆ.

**11.** ದಾವಾ ಅನುಸೂಚಿ ಬಿ, ಸಿ ಮತ್ತು ಡಿ ಸ್ವತ್ತುಗಳು ನನ್ನ ತಂದೆ ಸರ್ಕಾರಿ ಸೇವೆಯಲ್ಲಿದ್ದಾಗ ಆತನ ಸ್ವಂತ ಹಣದಿಂದ ಸಂಪಾದನೆ ಮಾಡಿದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಸತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ, ಸಿ ಮತ್ತು ಡಿ ಸ್ವತ್ತುಗಳಲ್ಲಿ ನನ್ನ ತಂದೆಯೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಯಾರೂ ಸ್ವಾಧೀನದಲ್ಲಿ ಇಲ್ಲ ಎಂದು. ನಾನು ಸರ್ವೆ ನಂ. **20** ರಲ್ಲಿ ನನ್ನ ತಂದೆ ಹಂಚಿಕೊಟ್ಟ ಮೇರೆಗೆ ಸ್ವಾಧೀನದಲ್ಲಿ ಇರುತ್ತೇನೆ.

<u>ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.</u>

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.